**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ1059/2019**

**ಸಿ.ಡಬ್ಲ್ಯೂಃ 13, ಪಿ.ಡಬ್ಲ್ಯೂಃ 02**

ಸಾಕ್ಷಿದಾರರ ಹೆಸರು : ಜಾನ್ಸನ್ ಡಿಸೋಜಾ

ತಂದೆಯ ಹೆಸರು : ಫ್ರಾನ್ಸಿಸ್ ಡಿಸೋಜಾ

ವಯಸ್ಸು : 46 ವರ್ಷ

ಉದ್ಯೋಗ : ಪೊಲೀಸ್ ನಿರೀಕ್ಷಕ, ಪೂತ್ತೂರು ನಗರ ಪೊಲೀಸ ಠಾಣೆ

ವಾಸ್ತವ್ಯ : ಪುತ್ತೂರು

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 28/02/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಸೆಪ್ಟೆಂಬರ್ 2012 ರಿಂದ ಅಕ್ಟೋಬರ್ 2015 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 17.12.2014 ರಂದು ನಾನು ನ್ಯಾಯಾಲಯದ ಖಾಸಗಿ ದೂರು ಸಂಖ್ಯೆಃ 196/2014 ನೇದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ. 264 /2014 ರಂತೆ ಪ್ರ.ವ.ವರದಿ ದಾಖಲಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿರುತ್ತೇನೆ. ದಿಃ 18.12.2014 ರಂದು ತನಿಖೆ ಯನ್ನು ಮುಂದುವರೆಸಿ ಸದರಿ ಪ್ರಕರಣದ ಪಿರ್ಯಾದಿ ಚಾಸಾ 1 ರವರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸುವಂತೆ ಹಾಗೂ ಸಾಕ್ಷಿ ಹಾಗೂ ಸಾಕ್ಷಾಧಾರವನ್ನು ಹಾಜರುಪಡಿಸುವಂತೆ ನೊಟೀಸನ್ನು ಜಾರಿ ಮಾಡಿರುತ್ತೇನೆ. ದಿಃ 03.08.2015 ರಂದು ಸದರಿ ಪ್ರಕರಣದ ತನಿಖೆ ಮುಂದುವರೆಸಲು ಜನಾರ್ದನ ಬಬ್ರುವಾಡಕರ ಇವರಿಗೆ ತನಿಖೆಯ ಕಡತವನ್ನು ವಹಿಸಿದ್ದು ಇರುತ್ತದೆ.

3. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ– 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ. ವ. ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ– 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 2 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 1 ರಿಂದ 4 , 6 , 8 , 9 ಆರೋಪಿ ಪರ ಶ್ರೀ ಕೆ ಹೆಚ ಎನ ವಕೀಲರಿಂದ,**

ಸದರಿ ಪ್ರಕರಣದಲ್ಲಿ ಎಪ್ ಐ ಅರ್ ದಾಖಲಿಸಲು ನ್ಯಾಯಾಲಯದಿಂದ ಯಾವುದೇ ಆದೇಶ ಬಂದಿರುವುದಿಲ್ಲ. ಎಪ್ ಐ ಆರ್ ಅನ್ನು ದಾಖಲಿಸಲು ನನಗೆ ಮೇಲಾಧಿಕಾರಿಗಳಿಂದ ಆದೇಶ ಇದ್ದ ಬಗ್ಗೆ ನಾನು ನೋಡಿಲ್ಲ. ಪಿರ್ಯಾದಿಯಲ್ಲಿರುವ ಮೇಲ್ನೋಟದ ಸಂಗತಿಗಳನ್ನು ಕಂಡುಹಿಡಿಯಲು ನಾನು

ಯಾವುದೇ ತನಿಖೆ ಮಾಡಿದ್ದು ಇಲ್ಲಾ. ಪಿರ್ಯಾದಿಯಲ್ಲಿರುವ ಸಂಗತಿ ಸುಳ್ಳು ಎಂದು ಗೊತ್ತಿದ್ದರೂ ಸಹ ಸುಳ್ಳು ಎಪ ಐ ಆರ್ ಅನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ತಹಶೀಲ್ದಾರ, ಪಿರ್ಯಾದಿದಾರರಿಗೆ ಹಾಗೂ ಅರೋಪಿಗಳಿಗೆ ಸದರಿ ಪ್ರಕರಣದಲ್ಲಿ ಸಹಕರಿಸಲು ನೀಡಿರುವ ನೋಟೀಸುಗಳನ್ನು ಇಂದು ನ್ಯಾಯಾಲಯದಲ್ಲಿ ನಾನು ನೋಡಿದ್ದು ಇಲ್ಲಾ. ಸದರಿ ನೋಟೀಸುಗಳನ್ನು ನಾನು ಮುಂದಿನ ತನಿಖಾಧಿಕಾರಿಗೆ ನೀಡಿರುತ್ತೇನೆ. ನಾನು ಯಾವುದೇ ನೋಟೀಸನ್ನು ನೀಡಿದ್ದೇ ಇಲ್ಲಾ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡಿದ್ದೇ ಇಲ್ಲಾ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : 1 ರಿಂದ 4 , 6 , 8 , 9 ನೇ ಆರೋಪಿ ಪರ ವಕೀಲರು 7 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಂಡಿರುತ್ತಾರೆ.</u>**

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**